# ನದಿ ನೀರಿನ ಹಂಚಿಕೆ ವಿವಾದಗಳು : ರಾಷ್ಟ್ರೀಯ ನದಿಗಳ ಜಾಲ – ಒಂದು ಪಕ್ಷಿ ನೋಟ

-ಎನ್. ಶಂಕರಪ್ಪ ತೋರಣಗಲ್ಲು , ಬಿ.ಇ. (ಸಿವಿಲ್) ., ಎಂ.ಇ (ರಚನೆಗಳು)

| ಸಂಖ್ಯೆ | ನದಿ ಪಾತ್ರ (ಜಲಾನಯನ) | ವಿವಾದದ ಸ್ತಿತಿ | ರಾಜ್ಯಗಳು | ಮುಖ್ಯ ಸಮಸ್ಯೆಗಳು | ಸಾಂಸ್ಥಿಕ ಯತ್ನಗಳು | ಪಂಚಾಯಿತಿಗಳು | ಮಂಡಳಿಗಳು | ಅಡೆತಡೆಗಳು |
|---|---|---|---|---|---|---|---|---|
| ೧ | ರಾವಿ-ಬಿಯಾಸ್ | ಬಗೆಹರಿದಿಲ್ಲ | ಪಂಜಾಬ್-ಹರಿಯಾಣ-ರಾಜಸ್ಥಾನ್ | ಬಿಯಾಸ್ ಯೋಜನೆಯ ಲಾಭ/ನಷ್ಟಗಳ ಅಂದಾಜಿಸಿಕೆಯಲ್ಲಿ/ಹಂಚಿಕೆಯಲ್ಲಿ ವಿವಾದ | | ಅಸ್ತಿತ್ವದಲ್ಲಿದೆ | ವಿದ್ಯುಚ್ಛಕ್ತಿ ಸಚಿವಾಲಯದ ಅಧೀನದಲ್ಲಿರುವ ಭಾಕ್ರಾ-ಬಿಯಾಸ್ ನಿರ್ವಹಣಾ ಮಂದಳಿ | ಹರಿಯಾಣ ರಾಜ್ಯ ರಚನೆಯಾಗುವ ಮೊದಲು ಸಮಸ್ಯೆಗಳಿರಲಿಲ್ಲ. ಈಗ ಚುನಾವಣೆ ಕೇಂದ್ರಿತ ಪಕ್ಷಗಳ ರಾಜಕೀಯದಿಂದ ಪರಿಹಾರ ಕಾನುವಲ್ಲಿ ಸೋಲು |
| ೨ | ಗಂಗಾ | | | | | | | |
| ೩ | ಯಮುನಾ ಉಪಪಾತ್ರ (ಗಂಗಾ ನದಿ ಕೊಳ್ಳ) | ಆಗಾಗ್ಗೆ ನ್ಯಾಯಾಲಯಗಳಿಗೆ ಮೊರೆಹೋಗುತ್ತಿರುವುದರಿಂದ ಬಗೆಹರಿದಿಲ್ಲ. | ಉತ್ತರ ಪ್ರದೇಶ-ದೆಹಲಿ-ಹಿಮಾಚಲ ಪ್ರದೇಶ-ಹರಿಯಾಣ-ಉತ್ತರಾಂಚಲ-ರಾಜಸ್ಥಾನ | ಮೇಲ್ಭಾಗದ ರಾಜ್ಯಗಳಾದ ಉತ್ತರ ಪ್ರದೇಶ ಮತ್ತು ಹರಿಯಾಣ ಕೆಳಭಾಗದ ದೆಹಲಿಗೆ ಕುಡಿಯುವ ಮತ್ತು ಕೈಗಾರಿಕೆಗೆ ಅಗತ್ಯವಾದ ನೀರನ್ನು ಒದಗಿಸುವ ಭರವಸೆಯಲ್ಲಿ ಲೋಪ | ಮೇ ೧೯೯೪ - ಯಮುನಾ ಮೇಲ್ದಂಡೆ ಒಪ್ಪಂದ | | ಯಮುನಾ ಮೇಲ್ದಂಡೆ ಮಂಡಳಿ- ಸದಸ್ಯ ರಾಜ್ಯಗಳ ನಡುವಿನ ಒಪ್ಪಂದಕ್ಕೆ ಅನುಗುಣವಾಗಿ ನೀರನ್ನು ಹಂಚುವ ಹೊಣೆ | ಮೂರು ರಾಜ್ಯಗಳ ಒಟ್ಟು ನೀರಿನ ಬೇಡಿಕೆ ನದಿ ಪಾತ್ರದಲ್ಲಿನ ಲಭ್ಯ ಪ್ರಮಾಣದ ಮೂರರಷ್ಟು . ರಾಜಕೀಯ ಸುಳಿಯಲ್ಲಿ ಸಿಲುಕಿ ದಾರಿತಪ್ಪಿದೆ. |
| ೪ | ಚಂಬಲ್ (ಯಮುನಾ ಉಪಪಾತ್ರ-ಗಂಗಾ ಕೊಳ್ಳ) | ಬಗೆಹರಿದಿದೆ. | ಮಧ್ಯಪ್ರದೇಶ-ಛತ್ತೀಸ್ ಘಡ ರಾಜಸ್ಥಾನ | ಪರಸ್ಪರ ರಾಜಿ ಸಂಧಾನದಿಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗಿದೆ. ರಾಜಕೀಯ ಮೀರಿದ ಉತ್ತಮ ನಿಲುವು. | ಕೊಳ್ಳ ಪ್ರದೇಶದ ಸಂಪೂರ್ಣ ಅಭಿವೃದ್ಧಿಯನ್ನು ಯಾವುದೇ ಲಿಖಿತ ಒಪ್ಪಂದವಿಲ್ಲದಿದ್ದರೂ ಪರಸ್ಪರ ನಂಬಿಕೆಯ ಮೇಲೆ ಕೈಗೊಳ್ಳಲಾಗಿದೆ. | | ಚಂಬಲ್ ನಿಯಂತ್ರಣ ಮಂಡಳಿ-ಮಧ್ಯಪ್ರದೇಶ-ರಾಜಸ್ಥಾನ ಮತ್ತು ಛತ್ತೀಸ್‌ಘಡ ಸನ್ನಿವೇಶಕ್ಕನುಗುಣವಾಗಿ ಪರಸ್ಪರ ಮಾತುಕತೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಿವೆ. | ಉತ್ತರ ಪ್ರದೇಶ ಈ ನದಿಯ ಪಾಲುದಾರ ರಾಜ್ಯವಾಗಿದ್ದರೂ ಛತ್ತೀಸ್‌ಘಡದೊಂದಿಗೆ ಹೊಂದಿರುವ ಆಂತರಿಕ ತಿಳುವಳಿಕೆಯಿಂದಾಗಿ ನೀರಿನ ಹಂಚಿಕೆಯಲ್ಲಿ ತನ್ನ ಪಾಲನ್ನು ಕೇಳಿಲ್ಲ. |
| ೫ | ಸೋನಾ (ಉಪ ಪಾತ್ರ-ಗಂಗಾ ಕೊಳ್ಳ) | ಬಾಣ ಸಾಗರ ಆಣೆಕಟ್ಟಿನ ವಿವಾದ ಬಗೆಹರಿದಿದ್ದು , ರಿಹಂದ್ ಸಮಸ್ಯೆ ಹಾಗೆಯೇ ಉಳಿದಿದೆ. | ಮಧ್ಯಪ್ರದೇಶ-ಉತ್ತರಪ್ರದೇಶ-ಬಿಹಾರ | ರಿಹಂದ್ ಆಣೆಕಟ್ಟಿನ ಮೂಲಕ ಬಿಹಾರ್ ಹಾಗೂ ಉತ್ತರ ಪ್ರದೇಶದ ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರನ್ನು ಬಿಡುಗಡೆ ಮಾಡಲಾಗುತ್ತಿದೆ. ನದಿಪಾತ್ರದಲ್ಲಿ ಲಭ್ಯವಿರುವ ನೀರಿನ ಅಂದಾಜಿಸಿಕೆಯ ಮೇಲೆ ಬಿಹಾರ ಅನುಮಾನ ತಾಳಿದೆ. | | | ಬಾಣ ಸಾಗರ ಮಂಡಳಿ-ಕೇದ್ರ ಸರ್ಕಾರದ ಅಧೀನದಲ್ಲಿ | ಪಾಲುದಾರ ರಾಜ್ಯಗಳು ಲಭ್ಯ ನೀರಿನ ಬಳಕೆ , ಯೋಜನೆಗಳಿಗೆ ಪರಸ್ಪರ ಹಲವಾರು ಒಪ್ಪಂದಗಳನ್ನು ಮಾಡಿಕೊಂಡಿವೆಯಾದರೂ ಕೆಲವು ಹಂಚಿಕೆ ವಿವಾದಗಳು ಇನ್ನೂ ಜೀವಂತವಾಗಿವೆ. |
| ೬ | ದಾಮೋದರ ಉಪಪಾತ್ರ(ಗಂಗಾ ಕೊಳ್ಳ) | ಬಗೆಹರಿದಿಲ್ಲ | ಜಾರ್ಖಂಡ್-ಪಶ್ಚಿಮ ಬಂಗಾಳ-ಕೇಂದ್ರ ಸರ್ಕಾರ | ನೀರಿನ ಬಳಕೆಯ ಸಮಸ್ಯೆಗಳು. ದಾಮೋದರ ಕೊಳ್ಳ ಸಮಿತಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಪ್ರಾಶಸ್ತ್ಯ ನೀಡಿದರೆ , ಪಶ್ಚಿಮ ಬಂಗಾಳ ನೀರಾವರಿಗೆ ಆದ್ಯತೆ ನೀಡಿದೆ. ಜಾರ್ಖಂಡ್‌ನಲ್ಲಿನ ಆಣೆಕಟ್ಟುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ನೀರನ್ನು ಸಂಗ್ರಹಿಸಿದರೆ ಕಲ್ಲಿದ್ದಲಿನ ಗಣಿ ಪ್ರದೇಶ ಮುಳುಗಡೆಯಾಗುತ್ತವೆ. ಆದ್ದರಿಂದ ಪೂರ್ಣ ಪ್ರಮಾಣದಲ್ಲಿ ನೀರನ್ನು ಸಂಗ್ರಹಿಸಲು ಜಾರ್ಖಂಡ್ ಹಿಂಜರಿರಿಯುತ್ತಿದೆ. | ಸಂಸತ್ತಿನಲ್ಲಿ ಕಾನೂನಿನ ಮೂಲಕ ಅರೆಸ್ವಯಮಾಧಿಕಾರದ ದಾಮೋದರ ಕೊಳ್ಳ ಸಮಿತಿ ಸ್ಥಾಪಿಸಲಾಗಿದೆ. | | ಅಸಂಸಂಗಳ ಟೆನಿಸನ್ ಕೊಳ್ಳ ಯೋಜನೆಯನ್ನು ಅನುಕರಿಸಿ ಭಾರತದಲ್ಲಿ ಸ್ಥಾಪಿಸಲಾದ ಮೊದಲ ಮಂಡಳಿಯಿದು. | ಪಾಲುದಾರ ರಾಜ್ಯಗಳ ವಿಭಿನ್ನ ಹಿತಾಸಕ್ತಿಗಳಿಂದಾಗಿ ಮಂಡಳಿಯನ್ನು ಸ್ಥಾಪಿಸಿದ ಮೂಲ ಆಶಯಗಳನ್ನು ನೆರವೇರಿಸಲು ಅಸಾಧ್ಯವಾಗಿದೆ. |
| ೭ | ಗಂಗಾ ಮೇಲದಂಡೆ ಉಪಪಾತ್ರ/ರಾಮಗಂಗಾ ಉಪಪಾತ್ರ(ಗಂಗಾ ಕೊಳ್ಳ) | ಈವರೆಗೆ ಯಾವುದೇ ಬಿಕ್ಕಟ್ಟುಗಳು ಎದುರಾಗಿಲ್ಲ. | ಉತ್ತರಾಂಚಲ | ತೆಹ್ರಿ ಆಣೆಕಟ್ಟಿನ ನಿರ್ಮಾಣ ಸುರಕ್ಷತೆ ಮತ್ತು ಪರಿಸರ ಹಾನಿಯ ಪ್ರಶ್ನೆಗಳನ್ನೆತ್ತಿದೆ. | ಕೇಂದ್ರ ಸರ್ಕಾರ-ಉತ್ತರಾಂಚಲ-ಉತ್ತರ ಪ್ರದೇಶಗಳನ್ನೊಳಗೊಂಡ ಗಂಗಾ ನಿರ್ವಹಣಾ ಸಂಸ್ಥೆ ರಚನೆಯಾಗಲಿದೆ. | | | |
| ೮ | ಬ್ರಹ್ಮಪುತ್ರಾ | ಯಾವುದೇ ಬಿಕ್ಕಟ್ಟುಗಳಿಲ್ಲ | ಅರುಣಾಚಲ ಪ್ರದೇಶ-ಅಸ್ಸಾಂ -ಮೇಘಾಲಯ- ನಾಗಾಲ್ಯಾಂಡ್-ಸಿಕ್ಕಿಂ-ಪಶ್ಚಿಮ ಬಂಗಾಳ | ಅನುಕೂಲಗಳ ಹಂಚಿಕೆಯಲ್ಲಿ ರಾಜ್ಯಗಳ ನಡುವೆ ಅಸಮಧಾನಗಳಿವೆ. | ಸಂಸತ್ತಿನ ಮೂಲಕ ಕಾನೂನನ್ನು ತಂದು ಬ್ರಹ್ಮಪುತ್ರಾ ಮಂಡಳಿಯ ರಚನೆ | | | ಭಾರತದಲ್ಲಿ ಅತ್ಯಂತ ಸಮೃದ್ಧವಾದ ನೀರಿನ ಪ್ರದೇಶವಿದು. ನೀರಿನ ಹಂಚಿಕೆ ಕುರಿತಾಗಿ ಯಾವುದೇ ಸಮಸ್ಯೆಗಳಿಲ್ಲ. ಆದರೆ ವಿವಿಧೋದ್ದೇಶದ ಯೋಜನೆಗಳಿಂದ ತಮಗೆ ನ್ಯಾಯವಾಗಿ ದಕ್ಕಬೇಕಾದ ಪಾಲು ದಕ್ಕುತ್ತಿಲ್ಲವೆಂದು ಪಾಲುದಾರರಲ್ಲಿ ಅಸಮಧಾನವಿದೆ. ನೆರೆ ಮತ್ತು ಮಣ್ಣಿನ ಸವಕಳಿ ತೀವ್ರ ಕಳವಳಕಾರಿಯಾಗಿವೆ. |
| ೯ | ಬರಕ್ ಪಾತ್ರ | ಬಗೆಹರಿದಿಲ್ಲ | ಮೇಘಾಲಯ-ಮಣಿಪುರ-ಮಿಝೋರಾಮ್-ನಾಗಾಲ್ಯಾಂಡ್-ಅಸ್ಸಾಂ-ತ್ರಿಪುರ | ಅನುಕೂಲಗಳ ಹಂಚಿಕೆ ಮತ್ತು ಮುಳಗಡೆ ಪ್ರದೇಶಗಳ ಬಗ್ಗೆ ಅಸಮಮಧಾನ | | | | ಅನುಕೂಲಗಳ ಹಂಚಿಕೆ ಕುರಿತಾಗಿ |
| ೧೦ | ನರ್ಮದಾ ಪಾತ್ರ | ಬಗೆಹರಿದಿಲ್ಲ | ಮಧ್ಯಪ್ರದೇಶ-ಮಹಾರಾಷ್ಟ್ರ-ಗುಜರಾತ್ | ಪುನರ್ವಸತಿ , ಮುಳುಗಡೆ ಮತ್ತು ಪರಿಸರ ಸಮಸ್ಯೆಗಳು | ೧೯೭೪ ರ ರಾಜ್ಯಗಳ ನಡುವಿನ ಪರಸ್ಪರ ಹಂಚಿಕೆಯ ಒಪ್ಪಂದ | ಅಸ್ತಿತ್ವದಲ್ಲಿದೆ | ಪಂಚಾಯಿತಿಯ ತೀರ್ಮಾನಗಲನ್ನು ಅನುಷ್ಠಾನಗೊಳಿಸಲು ನರ್ಮದಾ ನಿಯಂತ್ರಣ ಪ್ರಾಧಿಕಾರ | ಪಾಲುದಾರ ರಾಜ್ಯವಲ್ಲದಿದ್ದರೂ ಸಾಮಾಜಿಕ ಹೊಣೆಗಾರಿಕೆ ಮತ್ತು ನ್ಯಾಯದ ಆಧಾರದ ಮೇಲೆ ರಾಜಸ್ಥಾನವನ್ನು ಸಹ ಸೇರಿಸಲಾಯಿತು. ಇದಾದ ನಂತರ ಪುನರ್ವಸತಿ ನೀತಿಯನ್ನು ಸಮಗ್ರ ರೂಪಕ್ಕೆ ತರಲಾಯಿತು. |
| ೧೧ | ಗೋದಾವರಿ ಪಾತ್ರ | ಬಗೆಹರಿದಿದೆ. | ಮಹಾರಾಷ್ಟ್ರ-ಆಂಧ್ರಪ್ರದೇಶ-ಕರ್ನಾಟಕ-ಮಧ್ಯಪ್ರದೇಶ-ಒರಿಸ್ಸ | ದ್ವಿಪಕ್ಷೀಯ-ತ್ರಿಪಕ್ಷೀಯ ಮಾತುಕತೆಗಳ ಮೂಲಕ ೧೯೭೫ ರಲ್ಲಿ ಹಂಚಿಕೆ ಸೂತ್ರ ಅಂಗೀಕೃತಗೊಂಡಿತು. | ೧೯೬೧ ರಲ್ಲಿ ಹಂಚಬಹುದಾದ ನೀರಿನ ಲಭ್ಯತೆಯನ್ನು ಗುರುತಿಸಲು ಕೃಷ್ಣಾ-ಗೋದಾವರಿ ಸಮಿತಿ ರಚನೆಯಾಯಿತು | ಅಸ್ತಿತ್ವದಲ್ಲಿದೆ | | ದಕ್ಷಿಣ ಭಾರತದ ಅತಿ ದೊಡ್ಡ ನದಿ ಪಾತ್ರ |
| ೧೨ | ಕೃಷ್ಣಾ ಕೊಳ್ಳ | ಬಗೆಹರಿದಿಲ್ಲ | ಮಹಾರಾಷ್ಟ್ರ-ಆಂಧ್ರಪ್ರದೇಶ-ಕರ್ನಾಟಕ | ಪ್ರಸ್ತಾವಿತ ಯೋಜನೆಗಳಲ್ಲಿ ನೀರಿನ ಬಳಕೆ , ನೀರಿನ ಪಾತ್ರಾಂತರ ಸಾಗಾಣಿಕೆಯ ನಿರ್ಬಂಧ-ಅವಲಂಬನಾ ಯೋಗ್ಯ ನೀರಿನ ಪ್ರಮಾಣ | ಪಾಲುದಾರ ರಾಜ್ಯಗಳು (ಮೈಸೂರು) ಒಪ್ಪಂದವನ್ನು ಅನುಮೋದಿಸದಿದ್ದರೂ ಯೋಜನೆಗಲನ್ನು ಕೈಗೆತ್ತಿಕೊಳ್ಳಲು ಯೋಜನಾ ಆಯೋಗದಿಂದ ಅನುಮತಿ | ಅಸ್ತಿತ್ವದಲ್ಲಿದೆ | ತಮ್ಮ ಪಾಲಿನ ನೀರನ್ನು ಸಂಗ್ರಹಿಸಲು ಮತ್ತು ಬಳಸಲು ರಾಜ್ಯಗಳು ಕೈಗೆತ್ತಿಕೊಂಡ ಬೃಹತ್ ನೀರಾವರಿ ಯೋಜನೆಗಳ ಯಶಸ್ಸು | ದಕ್ಷಿಣ ಭಾರತದ ಎರಡನೇ ಅತಿ ದೊಡ್ಡ ಪಾತ್ರ. ಕೃಷ್ಣಾ-ಗೋದಾವರಿ ಸಮಿತಿ ಕೃಷ್ಣಾ ನದಿಯಲ್ಲಿ ಅವಲಂಬನಾ ಯೋಗ್ಯ ನೀರಿನ ಪ್ರಮಾಣ ನಿರ್ಧರಿಸಲು ಸಾಕಷ್ಟು ದತ್ತಾಂಶವಿಲ್ಲವೆಂದು ಅಭಿಪ್ರಾಯ ಪಟ್ಟಿದೆ. |
| ೧೩ | ತೆಲುಗು ಗಂಗಾ ಆಣೆಕಟ್ಟು-ಕೃಷ್ಣಾ ಪಾತ್ರ | ಬಗೆಹರಿದಿಲ್ಲ | ಆಂಧ್ರಪ್ರದೇಶ-ಕರ್ನಾಟಕ-ಕೇಂದ್ರೀಯ ಜಲ ಸಮಿತಿ | ಹೆಚ್ಚುವರಿ ನೀರಿನ ಮೇಲೆ ಹಕ್ಕು ಸಾಧಿಸಲು ರಾಜ್ಯಗಳ ನಡುವೆ ಸ್ಪರ್ಧೆ | | | | |

| ಸಂಖ್ಯೆ | ನದಿ ಪಾತ್ರ (ಜಲಾನಯನ) | ವಿವಾದದ ಸ್ತಿತಿ | ರಾಜ್ಯಗಳು | ಮುಖ್ಯ ಸಮಸ್ಯೆಗಳು | ಸಾಂಸ್ಥಿಕ ಯತ್ನಗಳು | ಪಂಚಾಯಿತಿಗಳು | ಮಂಡಳಿಗಳು | ಅಡೆತಡೆಗಳು |
|---|---|---|---|---|---|---|---|---|
| ೧೪ | ಕಾವೇರಿ ಪಾತ್ರ | ಬಗೆಹರಿದಿಲ್ಲ | ಕರ್ನಾಟಕ-ಕೇರಳ-ತಮಿಳುನಾಡು-ಪಾಂಡಿಚೆರಿ | ಸ್ವಾತಂತ್ರ್ಯ ಪೂರ್ವ ಒಪ್ಪಂದಗಳ ಪ್ರಸ್ತುತತೆಯ ವಿವಾದ-ನೀರಿನ ಹಂಚಿಕೆಯ ಬಗ್ಗೆ ಅಸಮಾಧಾನ-ಪಾತ್ರಾಂತರ ನೀರಿನ ಸಾಗಾಣಿಕೆಗೆ ಆಕ್ಷೇಪ-ನೀರಿನ ಲಭ್ಯತೆ ಮತ್ತು ಬಳಕೆಯ ಅಂಕಿ-ಅಂಶಗಳ ಬಗ್ಗೆ ಶಂಕೆ | | ಅಸ್ತಿತ್ವದಲ್ಲಿದೆ | ೧೯೯೮ ರಲ್ಲಿ ಕಾವೇರಿ ನೀರಿನ ಹೂಟ ಮತ್ತು ಕಾವೇರಿ ನದಿ ಪ್ರಾಧಿಕಾರದ ರಚನೆ | |
| ೧೫ | ಪೆನ್ನಾರ್ ಪಾತ್ರ | ಬಗೆಹರಿದಿಲ್ಲ | ಕರ್ನಾಟಕ-ಆಂಧ್ರಪ್ರದೇಶ | ಕೆರೆಗಳ ಅಭಿವೃದ್ಧಿ ಮತ್ತು ನೀರು ತಿರುವು | | | | |
| ೧೬ | ಬ್ರಹ್ಮಣಿ-ಬೈತರಣಿ ಪಾತ್ರ | ವಿವಾದಗಳಿಲ್ಲ | ಒರಿಸ್ಸಾ-ಜಾರ್ಖಂಡ್-ಮಧ್ಯಪ್ರದೇಶ | ಹೆಚ್ಚುವರಿ ನೀರು ಲಭ್ಯ ಪಾತ್ರ | ಎಲ್ಲ ಯೋಜನೆಗಳನ್ನು ಪರಸ್ಪರ ಮಾತುಕತೆಯ ಮೂಲಕ ಕೈಗೆತ್ತಿಕೊಳ್ಳಲಾಗಿದೆ. | | | |
| ೧೭ | ಸುವರ್ಣರೇಖಾ ಪಾತ್ರ | ವಿವಾದಗಳಿಲ್ಲ | ಬಿಹಾರ್-ಜಾರ್ಖಂಡ್-ಪಶ್ಚಿಮ ಬಂಗಾಳ -ಒರಿಸ್ಸಾ | ನೀರಿನ ಹಂಚಿಕೆ ಅದರ ಲಾಭಗಳ ಸ್ಪಷ್ಟ ನಿಖರ ಮಾಹಿತಿ ಲಭ್ಯ | | | | |
| ೧೮ | ಮಾಹಿ ಪಾತ್ರ | ವಿವಾದಗಳಿಲ್ಲ | ಮಧ್ಯಪ್ರದೇಶ-ಗುಜರಾತ್-ರಾಜಸ್ಥಾನ | | ನಿರ್ದಿಷ್ಟ ಯೋಜನೆಗಳಿಗೆ ಅನುಗುಣವಾಗಿ ಪರಸ್ಪರ ಒಪ್ಪಂದ, ಪುನರ್ವಸತಿ ಮತ್ತು ನೀರಿನ ಹಂಚಿಕೆ. | | | |
| ೧೯ | ತಾಪಿ ಪಾತ್ರ | ವಿವಾದಗಳಿಲ್ಲ | ಮಧ್ಯಪ್ರದೇಶ-ಗುಜರಾತ್-ಮಹಾರಾಷ್ಟ್ರ | ನಿರ್ದಿಷ್ಟ ಯೋಜನೆಗಳಿಗನುಗುಣವಾಗಿ ಪರಸ್ಪರ ಒಪ್ಪಂದಗಳು | ಅಂತರ್ವಲಯ ಮಂಡಳಿ | | | |
| ೨೦ | ಗಂಗಾ ಪಾತ್ರ-ಮಹಾಕಾಳಿ ನದಿ | ವಿವಾದಗಳಿಲ್ಲ | ನೇಪಾಳ | ಭಾರತದ ತನಕಪುರ ಬ್ಯಾರೇಜ್ ನಿರ್ಮಾಣ ಮತ್ತು ವಿದ್ಯುಚ್ಛಕ್ತಿ ಯೋಜನೆಗಳಿಂದ ಜಲಾಶಯ ಮುಳುಗಡೆ-ವಿದ್ಯುಚ್ಛಕ್ತಿ ದರ ಮತ್ತು ಹಂಚಿಕೆ ಪ್ರಮಾಣ-ನೀರಾವರಿ ಆದ್ಯತೆಗಳು | ೧೯೯೬ ರಲ್ಲಿ ಮಾತುಕತೆಯ ಮೂಲಕ ಮಹಾಕಾಳಿ ಒಪ್ಪಂದ | ಸಮಾನ ನೀರಿನ ಹಕ್ಕು ಮತ್ತು ಭಾರತದಲ್ಲಿ ನೀರಿನ ಬಳಕೆಯ ಆಧಾರಗಳು | | |
| ೨೧ | ಗಂಗಾ ಪಾತ್ರ-ಕೋಸಿ ಮತ್ತು ಗಂಡಕಿ | ಬಗೆಹರಿದಿಲ್ಲ | ನೇಪಾಳ | ಬಿಹಾರ ಮತ್ತು ನೇಪಾಳದಲ್ಲಿ ಪ್ರವಾಹದಿಂದಾಗುವ ನಷ್ಟಗಳಿಗೆ ಭಾರತ ಸೂಚಿಸುತ್ತಿರುವ ಪರಿಹಾರಗಳಿಗೆ ನೇಪಾಳದ ಅಸಮ್ಮತಿ-ತನ್ನ ದೇಶದ ಹಿತಾಸಕ್ತಿ ಧಕ್ಕೆಯಾಗುವುದೆಂದು ನೇಪಾಳದ ನಿಲುವು | ಮಾತುಕತೆಗಳು ಪ್ರಗತಿಯಲ್ಲಿ | | | |
| ೨೨ | ಗಂಗಾ-ಫರಕ್ಕಾ ಬ್ಯಾರೇಜ್ | ವಿವಾದಗಳಿಲ್ಲ | ಬಾಂಗ್ಲಾದೇಶ | ಪಶ್ಚಿಮ ಬಂಗಾಲದ ಹೂಗ್ಲಿ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಿಸಲು ಭಾರತ ನಿರ್ಮಿಸಿದ ಆಣೆಕಟ್ಟೆಯಿಂದ ತನ್ನ ದೇಶದಲ್ಲಿ ಪರಿಸರ ಅಸಮತೋಲನಗೊಂಡಿದೆಯೆಂದು ಬಾಂಗ್ಲಾದ ವಾದ-ಸಂಕಷ್ಟದ ದಿನಗಳಲ್ಲಿ ತನ್ನ ದೇಶದಲ್ಲಿ ನೀರಿನ ಪ್ರಮಾಣ ಕನಿಷ್ಟಕ್ಕಿಂತಲೂ ಕೆಳಗಿರುತ್ತದೆಯೆಂಬ ಅಳಲು | ೧೯೯೬ ರಲ್ಲಿ ಮಾತುಕತೆಯ ಮೂಲಕ ದ್ವಿಪಕ್ಷೀಯ ಒಪ್ಪಂದ. | ದೇಶದ ಸಾರ್ವಭೌಮತ್ವ ಮತ್ತು ಸಮಾನ ಬಳಕೆಯ ನೀತಿ | | |
| ೨೩ | ಬ್ರಹ್ಮಪುತ್ರಾ | ಬಗೆಹರಿದಿಲ್ಲ | ಬಾಂಗ್ಲಾದೇಶ | ನದಿ ತಿರುವು ಹಾಗೂ ಅಭಿವೃದ್ಧಿ ಯೋಜನೆಗಳಿಗೆ ಬಾಂಗ್ಲಾದೇಶದ ಅಸಮ್ಮತಿ. | ಮಾತುಕತೆಗಳು ಪ್ರಗತಿಯಲ್ಲಿ | ಪರಿಸರ ಕಾಳಜಿ ಮತ್ತು ಚಾರಿತ್ರಿಕ ಅಸಂತುಷ್ಟಿ | | |
| ೨೪ | ಬ್ರಹ್ಮಪುತ್ರಾ-ತೀಸ್ತಾ ನದಿ | ಬಗೆಹರಿದಿಲ್ಲ | ಬಾಂಗ್ಲಾದೇಶ | ನೀರಿನ ಹಂಚಿಕೆ ಪ್ರಮಾಣದಲ್ಲಿ ಬಿಕ್ಕಟ್ಟು | ಮಾತುಕತೆಗಳು ಪ್ರಗತಿಯಲ್ಲಿ | ಸಮಾನತೆಯ ಹಕ್ಕಿನ ಪ್ರತಿಪಾದನೆ | | |
| ೨೫ | ಬ್ರಹ್ಮಪುತ್ರಾ-ಚುಕ್ಕಾ ಮತ್ತು ತಾಲ | ವಿವಾದಗಳಿಲ್ಲ | ಭೂತಾನ್ | ವಿದ್ಯುಚ್ಛಕ್ತಿ ಯೋಜನೆಗಳು -ಸಹಭಾಗಿತ್ವದಲ್ಲಿ | | | | |
| ೨೬ | ಸಿಂಧೂ | | ಪಾಕಿಸ್ತಾನ | ಸಿಂಧೂ ನದಿಪಾತ್ರವನ್ನು ಅದರ ಎಲ್ಲ ಉಪನದಿಗಳನ್ನು ಸೇರಿಸಿ ಒಂದು ಸಮಗ್ರ ಘಟಕವಾಗಿ ಪರಿಗಣಿಸಿಲ್ಲ.-ಭಾರತದ ಜಲಮಾರ್ಗದ ತಲ್‌ಬುಲ್ ಯೋಜನೆ ಮುಸುಕಿನ ಮರೆಯಲ್ಲಿ ನೀರನ್ನು ಸಂಗ್ರಹಿಸಲು ಭಾರತ ಹೂಡಿರುವ ತಂತ್ರವೆಂದು ಪಾಕಿಸ್ತಾನದ ಗುಮಾನಿ-ಆದರೆ ಭಾರತ ಅದು ನಿಯಂತ್ರಣ ನಿರ್ಮಾಣವೆಂಬ ಸಮಜಾಯಿಷಿ | ೧೯೬೦ ರ ಸಿಂಧೂ ನದಿ ಒಪ್ಪಂದ | ಸಮಾನತೆಯ ಹಕ್ಕಿನ ಪ್ರತಿಪಾದನೆ | | |